2014–15ನೇ ಸಾಲಿನ ಆಯವ್ಯಯದಲ್ಲಿ ಬಿಡುಗಡೆಯಾದ ಅನುದಾನ

91 (105); ಶ್ರೀ ಮಂಜುನಾಥ ಗೌಡ ಕೆ.ಎಸ್ (ಮಾಲೂರು)

ಅ) 2014–15 ನೇ ಸಾಲಿನ ಆಯವ್ಯಯದಲ್ಲಿ ಕೋಲಾರ ಜಿಲ್ಲೆಯ ವಿವಿಧ ಇಲಾಖೆಗಳಿಗೆ ಬಿಡುಗಡೆಯಾದ ಅನುದಾನವೆಷ್ಟು (ಇಲಾಖಾವಾರು, ತಾಲ್ಲೂಕುವಾರು ವಿವರ ನೀಡುವುದು);

ಆ) 2014–15ನೇ ಸಾಲಿನ ಆಯವ್ಯಯದಲ್ಲಿ ಮಾಲೂರು ತಾಲ್ಲೂಕಿಗೆ ವಿವಿಧ ಇಲಾಖೆಗಳಿಂದ ನೀಡಲಾಗಿರುವ ಅನುದಾನವೆಷ್ಟು (ವಿವರ ನೀಡುವುದು);

ಇ) ಈ ಅನುದಾನವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗಿದೆಯೇ;

ಈ) ಹಾಗಿಲ್ಲದಿದ್ದಲ್ಲಿ, ಇಲಾಖಾವಾರು ಬಾಕಿ ಉಳಿದಿರುವ ಅನುದಾನವೆಷ್ಟು; ಬಾಕಿ ಉಳಿದಿರುವ ಅನುದಾನವನ್ನು ಬಳಸಿಕೊಳ್ಳಲು ಕಾಲಮಿತಿ ನಿಗದಿಪಡಿಸಿದೆಯೇ (ವಿವರ ನೀಡುವುದು);

ಉ) 2014–15 ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನದಲ್ಲಿ ಇಲಾಖಾವಾರು ಕೈಗೊಂಡ ಕಾಮಗಾರಿಗಳೆಷ್ಟು (ಅಂಕಿ ಅಂಶಗಳ ಸಮೇತ ಮಾಹಿತಿ ಒದಗಿಸುವುದು)?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯ ಮಂತ್ರಿಗಳು)

ಅ) **ಆ), ಇ), ಈ) ಮತ್ತು ಉ)** ಜಿಲ್ಲಾ ವಲಯ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮಾತ್ರ ಜಿಲ್ಲಾವಾರು ಹಣ ಬಿಡುಗಡೆಯಾಗುತ್ತದೆ. ರಾಜ್ಯ ವಲಯ ಕಾರ್ಯಕ್ರಮಗಳಿಗೆ ಲೆಕ್ಕ ಶೀರ್ಷಿಕೆವಾರು ಹಣ ಬಿಡುಗಡೆ ಮಾಡಲ್ಪಡುವುದರಿಂದ ಈಗಿರುವ ಲೆಕ್ಕಪದ್ಧತಿಯನ್ವಯ ಇಲಾಖಾವಾರು ತಾಲ್ಲೂಕುಗಳಿಗೆ ಬಿಡುಗಡೆಯಾದ ಕ್ರೂಢೀಕೃತ ಮಾಹಿತಿ ಲಭ್ಯವಿರುವುದಿಲ್ಲ.